# www.karunaduexams.com

**ಸಾಮಾನ್ಯ ಜ್ಞಾನ ಮತ್ತು ಪ್ರಚಲಿತ ವಿದ್ಯಮಾನ ಕ್ವಿಜ್-ಅಕ್ಟೋಬರ್,21,22,23,2017**

www.karunaduexams.com

1. ಏಷ್ಯಾ ಕಪ್ ಪುರುಷರ ಹಾಕಿ ಪಂದ್ಯಾವಳಿ-2017 ರಲ್ಲಿ ಯಾವ ದೇಶವು ಪ್ರಶಸ್ತಿ ಪಡೆಯಿತು?
ಅ. ಜಪಾನ್
**ಆ. ಭಾರತ**
ಇ. ಮಲೇಷಿಯ
ಈ. ಪಾಕಿಸ್ತಾನ

ಬಾಂಗ್ಲಾದೇಶದ ಢಾಕಾದಲ್ಲಿ ನಡೆದ ಏಷ್ಯಾ ಕಪ್ ಪುರುಷರ ಹಾಕಿ ಪಂದ್ಯಾವಳಿ-2017 ರ ಫೈನಲ್ ಪಂದ್ಯದಲ್ಲಿ ಮಲೇಷಿಯಾ ವಿರುದ್ಧ 2-1 ಗೋಲುಗಳಿಂದ ಭಾರತದ ಪುರುಷರ ಹಾಕಿ ತಂಡ ಪ್ರಶಸ್ತಿಗಳಿಸಿತು.

2. ಮಕಾವ್ ಓಪನ್ ಗಾಲ್ಫ್ ಪಂದ್ಯಾವಳಿ 2017 ರಲ್ಲಿ ಪ್ರಶಸ್ತಿ ಮುಡಿಗೇರಿಸಿಕೊಂಡ ಭಾರತದ ಗಾಲ್ಫ್ ಆಟಗಾರ ಯಾರು?
ಅ. ಚಿಕ್ಕರಂಗಪ್ಪ
ಆ. ಅರ್ಜುನ್ ಅತ್ವಾಲ್
ಇ. ಜ್ಯೋತಿ ರಾಂಧವ
**ಈ. ಗಗನ್ ಜೀತ್ ಬುಲ್ಲರ್**

ಭಾರತದ ಗಗನ್ ಜೀನ್ ಬುಲ್ಲರ್ ಮಕಾವ್ ಓಪನ್ ಗಾಲ್ಫ್ ಪಂದ್ಯಾವಳಿ 2017 ರಲ್ಲಿ ಪ್ರಶಸ್ತಿ ಮುಡಿಗೇರಿಸಿಕೊಂಡರು. ಈ ವಿಜಯದೊಂದಿಗೆ ಬುಲ್ಲರ್ ರವರು ಅರ್ಜುನ್ ಅತ್ವಾಲ್ ಮತ್ತು ಜ್ಯೋತಿ ರಾಂಧವ ರೊಂದಿಗೆ ಏಷ್ಯಾ ಖಂಡದ ಪ್ರವಾಸದಲ್ಲಿ ಅತೀ ಹೆಚ್ಚು (8)ಜಯ ದಾಖಲಿಸಿದವರಾಗಿ ಸ್ಥಾನ ಗಳಿಸಿದರು.

3. 2017 ರ ಡೆನ್ಮಾರ್ಕ್ ಓಪನ್ ಸೂಪರ್ ಸೀರೀಸ್ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಪ್ರಶಸ್ತಿ ಪಡೆದ ಭಾರತೀಯ ಆಟಗಾರ ಯಾರು?
**ಅ. ಕಿಡಂಬಿ ಶ್ರೀಕಾಂತ್**
ಆ. ಪರುಪಲ್ಲಿ ಕಶ್ಯಪ್
ಇ. ಪಿ.ವಿ.ಸಿಂಧು
ಈ. ಅಜಯ್ ಜಯರಾಮ್

2017 ರ ಡೆನ್ಮಾರ್ಕ್ ಓಪನ್ ಸೂಪರ್ ಸೀರೀಸ್ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಭಾರತದ ಕಿಡಂಬಿ ಶ್ರೀಕಾಂತ್ ಪ್ರಶಸ್ತಿ ಪಡೆದರು.

4. ಭಾರತದಲ್ಲಿ ಪ್ರಪ್ರಥಮವಾಗಿ "ರೋಲ್ ಆನ್-ರೋಲ್ ಆಫ್ (ರೋ-ರೋ) ಹಡಗು ಸೇವೆಯನ್ನು ಯಾವ ರಾಜ್ಯದಲ್ಲಿ ಪ್ರಾರಂಭಿಸಿಸಲಾಯಿತು?
ಅ. ಪಶ್ಚಿಮ ಬಂಗಾಳ
ಆ. ತಮಿಳುನಾಡು
**ಇ. ಗುಜರಾತ್**
ಈ. ಆಂಧ್ರಪ್ರದೇಶ
ಗುಜರಾತ್ ನ ಭವನಗರ ಜಿಲ್ಲೆಯ ಘೋಗಾದಿಂದ ಬರೂಚ್ ಜಿಲ್ಲೆಯ ದಹೆಜ್ ವರೆಗೂ ಭಾರತದ ಪ್ರಪ್ರಥಮವಾಗಿ "ರೋಲ್ ಆನ್-ರೋಲ್ ಆಫ್ (ರೋ-ರೋ) ಹಡಗು ಸೇವೆಯನ್ನು ಪ್ರಧಾನಿ

www.karunaduexams.com

ನರೇಂದ್ರ ಮೋದಿ ರವರು ಉದ್ಘಾಟಿಸಿದರು. ಈ ಹಡಗು ಸೇವೆ ಪ್ರಯಾಣಿಕ ಮತ್ತು ವಾಹನಗಳನ್ನು ಒಂದೆಡೆಯಿಂದ ಮತ್ತೊಂದೆಡೆಗೆ ಕೊಂಡೊಯ್ಯಲಿದೆ, ಅಲ್ಲದೆ ಈ ಹಡಗು ಎರಡೂ ನಗರಗಳ ಅಂತರವನ್ನು 310 ಕಿ.ಮೀ. ಗಳಿಂದ ಕೇವಲ 30 ಕಿ.ಮೀ.ಗಳಿಗೆ ತಗ್ಗಿಸಲಿದೆ. ಇದರಿಂದ ಸಮಯ ಮತ್ತು ಹಣ ಉಳಿತಾಯವಾಗಿಲಿದೆ. ಸದ್ಯ ಈ ಹಡಗು ಸುಮಾರು 100 ವಾಹನಗಳು ಮತ್ತು 250 ಪ್ರಯಾಣಿಕರನ್ನು ಹೊತ್ತೊಯ್ಯುವ ಸಾಮರ್ಥ್ಯ ಹೊಂದಿದೆ.

5. ಈ ಕೆಳಗಿನ ಯಾವ ರಾಜ್ಯ ಬಾಳೆಹಣ್ಣಿನ ಉತ್ಪಾದನೆಯಲ್ಲಿ ಹೊಸ ತಂತ್ರಜ್ಞಾನವನ್ನು ಅಭಿವೃದ್ದಿಪಡಿಸುವ ಸಲುವಾಗಿ ಇತ್ತೀಚೆಗೆ ಬಾಳೆಹಣ್ಣಿನ ರಾಷ್ಟ್ರೀಯ ಸಂಶೋಧನಾ ಸಂಸ್ಥೆಯೊಂದಿಗೆ ಒಪ್ಪಂದ ಮಾಡಿಕೊಂಡಿದೆ?
**ಅ. ಆಂಧ್ರಪ್ರದೇಶ**
ಆ. ಕೇರಳ
ಇ. ಕರ್ನಾಟಕ
ಈ. ತಮಿಳುನಾಡು

ಬಾಳೆಹಣ್ಣಿನ ಉತ್ಪಾದನೆಯಲ್ಲಿ ಹೊಸ ತಂತ್ರಜ್ಞಾನವನ್ನು ಅಭಿವೃದ್ದಿಪಡಿಸುವ ಸಲುವಾಗಿ ಆಂಧ್ರಪ್ರದೇಶ ಸರ್ಕಾರದೊಂದಿಗೆ ಇತ್ತೀಚೆಗೆ ಬಾಳೆಹಣ್ಣಿನ ರಾಷ್ಟ್ರೀಯ ಸಂಶೋಧನಾ ಸಂಸ್ಥೆ, ತಿರುಚಿಯೊಂದಿಗೆ ಒಪ್ಪಂದ ಮಾಡಿಕೊಂಡಿದೆ.

6. ಕೌಶಲ್ಯಾಧಾರಿತ ತರಬೇತಿ ನೀಡಲು ಭಾರತದ ಮೊಟ್ಟಮೊದಲ “ಪ್ರಧಾನಮಂತ್ರಿ ಕೌಶಲ್ಯ ಕೇಂದ್ರ” ಯಾವ ನಗರದಲ್ಲಿ ಸ್ಥಾಪನೆಗೊಂಡಿದೆ?
ಅ. ಅಹಮದಾಬಾದ್
ಆ. ಅಲಹಾಬಾದ್
ಇ. ಮುಂಬೈ
**ಈ. ದೆಹಲಿ**

ಕೇಂದ್ರ ಸರ್ಕಾರದ ಸ್ಮಾರ್ಟ್ ಸಿಟಿ ಯೋಜನೆಯಡಿ ನಿರುದ್ಯೋಗಿ ಯುವಕ/ಯುವತಿಯರಿಗೆ ಕೌಶಲ್ಯಾಧಾರಿತ ತರಬೇತಿ ನೀಡಲು ಭಾರತದ ಮೊಟ್ಟಮೊದಲ “ಪ್ರಧಾನಮಂತ್ರಿ ಕೌಶಲ್ಯ ಕೇಂದ್ರ” ದೆಹಲಿಯಲ್ಲಿ ಸ್ಥಾಪನೆ ಮಾಡಲಾಯಿತು.

7. ಜಮ್ಮು-ಕಾಶ್ಮೀರ ರಾಜ್ಯದೊಂದಿಗೆ ನಿರಂತರ ಮಾತುಕತೆ ನಡೆಸಲು ಭಾರತ ಸರ್ಕಾರದ ಪ್ರತಿನಿಧಿಯಾಗಿ ಯಾರನ್ನು ನೇಮಕ ಮಾಡಲಾಗಿದೆ?
ಅ. ಮುಕುಲ್ ರಾಯ್
**ಆ. ದಿನೇಶ್ವರ್ ಶರ್ಮಾ**
ಇ. ರಾಜೀವ್ ಕುಮಾರ್
ಈ. ಸಯ್ಯದ್ ಆಸಿಫ್ ಇಬ್ರಾಹಿಂ

ಜಮ್ಮು-ಕಾಶ್ಮೀರ ರಾಜ್ಯದೊಂದಿಗೆ ನಿರಂತರ ಮಾತುಕತೆ ನಡೆಸಲು ಭಾರತ ಸರ್ಕಾರದ ವಿಶೇಷ ಪ್ರತಿನಿಧಿಯಾಗಿ ಮಾಜಿ ಐ.ಬಿ. ಮುಖ್ಯಸ್ಥರಾದ ದಿನೇಶ್ವರ್ ಶರ್ಮಾ ರವರನ್ನು ನೇಮಕ ಮಾಡಲಾಗಿದೆ. ಇವರು ಜಮ್ಮು-ಕಾಶ್ಮೀರದ ಎಲ್ಲಾ ಪಾಲುದಾರರೊಂದಿಗೆ ನಿರಂತರ ಸಂಪರ್ಕದಲ್ಲಿದ್ದು ಮಾತುಕತೆ ನಡೆಸಲಿದ್ದಾರೆ.

www.karunaduexams.com

8. ಕೇಂದ್ರ ಕೈಗಾರಿಕಾ ಭದ್ರತಾ ಪಡೆ (CISF) ಸಾಮಾಜಿಕ ಮಾಧ್ಯಮಗಳ ಪ್ರವೃತ್ತಿ ಮತ್ತು ದತ್ತಾಂಶಗಳನ್ನು ಸುರಕ್ಷತೆಯ ದೃಷ್ಠಿಯಿಂದ ವಿಶ್ಲೇಷಣೆ ನಡೆಸುತ್ತಿದೆ. ಈ ಪಡೆಯ ಕೇಂದ್ರ ಕಚೇರಿ ಎಲ್ಲಿದೆ?
ಅ. ಕಾನ್ಪುರ
ಆ. ನಾಗಪುರ
ಇ. ಚಂಡೀಗಡ
**ಈ. ದೆಹಲಿ**

ಕೇಂದ್ರ ಕೈಗಾರಿಕಾ ಭದ್ರತಾ ಪಡೆಯ (CISF) ಕೇಂದ್ರ ಕಚೇರಿ ದೆಹಲಿಯಲ್ಲಿದೆ. ಈ ಪಡೆ ಸಾಮಾಜಿಕ ಮಾಧ್ಯಮಗಳ ಪ್ರವೃತ್ತಿ ಮತ್ತು ದತ್ತಾಂಶಗಳನ್ನು ಸುರಕ್ಷತೆಯ ದೃಷ್ಠಿಯಿಂದ ವಿಶ್ಲೇಷಣೆ ನಡೆಸಿ ದೇಶದ ವಿಮಾನ ನಿಲ್ದಾಣ, ಪರಮಾಣು ಕೇಂದ್ರ ಮತ್ತು ಅಂತರಿಕ್ಷ ಕೇಂದ್ರಗಳ ಸುರಕ್ಷತೆಯನ್ನು ಹೆಚ್ಚಿಸಲು ಬಳಸಲಿದೆ.

9. ಭಾರತದಲ್ಲಿ ಅತೀ ದೊಡ್ಡ ಮಾನವ ನಿರ್ಮಿತ ಚಿನ್ಹೆಯನ್ನು ನಿರ್ಮಿಸಿ, ಲಿಮ್ಕಾ ಬುಕ್ ಆಫ್ ರೆಕಾರ್ಡ್ಸ್ ನಲ್ಲಿ ತನ್ನ ಹೆಸರು ದಾಖಲಿಸಿದ ಚುನಾವಣಾ ಆಯೋಗ ಯಾವ ರಾಜ್ಯಕ್ಕೆ ಸಂಬಂಧಿಸಿದ್ದಾಗಿದೆ?
ಅ. ಉತ್ತರಪ್ರದೇಶ
**ಆ. ಮೇಘಾಲಯ**
ಇ. ಹಿಮಾಚಲ ಪ್ರದೇಶ
ಈ. ಮಹಾರಾಷ್ಟ್ರ

ಹೊಸದಾಗಿ ನೋಂದಣಿಯಾದ ಯುವ ಮತದಾರರಿಂದ ಭಾರತದಲ್ಲಿ ಅತೀ ದೊಡ್ಡ ಮಾನವ ಚಿನ್ಹೆಯನ್ನು ನಿರ್ಮಿಸಿ, ಮೇಘಾಲಯ ಚುನಾವಣಾ ಆಯೋಗ ಲಿಮ್ಕಾ ಬುಕ್ ಆಫ್ ರೆಕಾರ್ಡ್ಸ್ ನಲ್ಲಿ ತನ್ನ ಹೆಸರು ದಾಖಲಿಸಿತು. 2870 ಯುವ ಮತದಾರರಿಂದ ಈ ಮಾನವ ಸರಪಳಿಯನ್ನು ನಿರ್ಮಿಸಿತು.

10. ಫಿಪಾ (FIFA) 2017 ರ "ವರ್ಷದ ಅತ್ಯುತ್ತಮ ಆಟಗಾರ" ಪ್ರಶಸ್ತಿಗೆ ಭಾಜನರಾದ ಪುರುಷ ಆಟಗಾರ ಯಾರು?
ಅ. ಒಲಿವಿಯರ್ ಗಿರೋಡ್
ಆ. ನೇಮರ್
ಇ. ರೊನಾಲ್ಡೀನೊ
**ಈ. ಕ್ರಿಸ್ಟಿಯಾನ ರೊನಾಲ್ಡೊ**

ಪೋರ್ಚುಗಲ್ ನ ರಿಯಲ್ ಮ್ಯಾಡ್ರಿಡ್ ಕ್ಲಬ್ ನ ಫುಟ್ ಬಾಲ್ ಆಟಗಾರ ಕ್ರಿಸ್ಟಿಯಾನ ರೊನಾಲ್ಡೊ ಫಿಪಾ (FIFA) 2017 ರ "ವರ್ಷದ ಅತ್ಯುತ್ತಮ ಆಟಗಾರ" ಪ್ರಶಸ್ತಿಗೆ ಭಾಜನರಾದರು.

www.karunaduexams.com